ಮೇಲೂ ಪರಿಣಾಮವಾಗುತ್ತದೆ. ನಾನೊಬ್ಬ ಭ್ರಷ್ಟ ಶಾಸಕನಾಗಿ ಈ ಸದನದಲ್ಲಿ ಕೆಲಸ ಮಾಡಲಿಕ್ಕೆ ಏನೂ ಹಕ್ಕು ಇರುವುದಿಲ್ಲ. ನಾನು ಮರ್ಯಾದೆಯಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ನನ್ನ ಕ್ಷೇತ್ರದ ಜನತೆ ನನ್ನ ಮೇಲೆ ಏನು ವಿಶ್ವಾಸವನ್ನು ಇಟ್ಟುಕೊಂಡಿದ್ದಾರೆ. ಅದನ್ನು ಉಳಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಇಂತಹ ಪತ್ರಿಕೆಗಳ ಬಗ್ಗೆ ಒಂದು ಹಿಡಿತ ಬೇಕು. ಇಂತಹ ಪತ್ರಿಕೆಗಳ ಮೇಲೆ ಹಿಡಿತ ಇಲ್ಲದೇ ಇದ್ದರೆ ಎಲ್ಲರ ಮೇಲೂ ಬರುತ್ತದೆ. ಇನ್ನೂ ಕೆಲವು ಪತ್ರಿಕೆಗಳನ್ನು ನಾವು ನೋಡಿದ್ದೇವೆ. ಇಂತಹ ಪತ್ರಿಕೆಗಳ ಮೇಲೆ ಕಡಿವಾಣವನ್ನು ಹಾಕುವ ಪ್ರಯತ್ನ ಈ ಸದನದಲ್ಲಿ ನಡೆಯದಿದ್ದರೆ ಕಷ್ಟವಾಗುತ್ತದೆ ಪ್ರಾಯಶಃ ನಾವು ಒಳ್ಳೆಯ ಪತ್ರಿಕೆಗಳ ಬಗ್ಗೆ ಚರ್ಚೆ ಮಾಡುತ್ತಾ ಇಲ್ಲ. ಅವರ ಬಗ್ಗೆ ನಾವು ಯಾವ ಆಪಾದನೆಯನ್ನು ಮಾಡುವುದಿಲ್ಲ. ಆದರೆ, ಈ ಪತ್ರಿಕೆಯವರು ನನ್ನ ಮೇಲೆ ಮಾಡಿರುವ ಆಪಾದನೆ ಸರಿ ಇಲ್ಲ ಆದ್ದರಿಂದ, ಹಕ್ಕು ಬಾಧ್ಯತಾ ಸಮಿತಿಯವರು ತನಿಖೆ ಮಾಡಿ ವರದಿಯನ್ನು ಕೊಟ್ಟಿರುವಂಥಾದ್ದು, ತಾವೇನು ತೀರ್ಮಾನವನ್ನು ತೆಗೆದುಕೊಳ್ಳುತ್ತೀರಿ, ಅದಕ್ಕೆ ನಾನು ಬದ್ಧನಾಗಿರುತ್ತೇನೆ.

ಇ) ವಿಷಯ : ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆ ಖರೀದಿಯನ್ನು ಬಾಂದ್ ಮಾಡಿರುವ ಬಗ್ಗೆ

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆಗಾರರು ಬಹಳ ಹೆಚ್ಚು. ಇಡೀ ದೇಶದಲ್ಲಿಯೇ ತೊಗರಿ ಬೆಳೆಯುವವರಲ್ಲಿ ಬಹಳ ಪ್ರಮುಖ ಜಿಲ್ಲೆ. ಅಲ್ಲಿ ಪ್ರಗತಿ ಎಕರೆಗೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ತೊಗರಿ ಬೆಳೆಯಯುತ್ತಾರೆ. ಈ ವರ್ಷ ಕೂಡ ಬೆಳೆದಿದ್ದಾರೆ. ಆದರೆ, ಈ ಬೆಳೆ ಬಜಾರ್‌ಗೆ ಬಂದಕೂಡಲೇ, ಅದರ ರೇಟ್ ಡೌನ್ ಆಗಿಬಿಡುತ್ತದೆ. ಈ ವರ್ಷ ಕೂಡ, ಅವರು ಎಷ್ಟು ಖರ್ಚುಮಾಡಿದ್ದಾರೆ, ಅದಕ್ಕಿಂತ ಕಡಿಮೆ ಬಜಾರ್‌ನಲ್ಲಿ ಸಿಕ್ಕುತ್ತಾ ಇದೆ. ಸರ್ಕಾರದವರು ತೊಗರಿ ಬೆಳೆ ಬೋರ್ಡ್ ಎಂದು ಮಾಡಿದ್ದಾರೆ. ಅವರು, ಈ ತೊಗರಿ ಖರೀದಿಯನ್ನು ಶುರು ಮಾಡಿದ್ದರು. ಕಳೆದ 4–5 ದಿವಸಗಳಲ್ಲಿ ಸ್ವಲ್ಪ ಖರೀದಿ ಮಾಡಿದರು. ಆದರೆ, ಈಗ ಏಕಾಏಕಿ ಖರೀದಿಯನ್ನು ಬಂದ ಮಾಡಿದ್ದಾರೆ. ಮಾರ್ಕೆಟಿನಲ್ಲಿ ಅವರು ಖರ್ಚು ಮಾಡಿರುವ ದುಡ್ಡು ಇವತ್ತು ರೈತರಿಗೆ ಸಿಕ್ಕುತ್ತಾ ಇಲ್ಲ. ಆ ದೃಷ್ಟಿಯಿಂದ ಸರ್ಕಾರ ಮಾರ್ಕೆಟಿಗೆ ಪ್ರವೇಶ ಮಾಡಬೇಕು. ಇದು ಒಂದೇ ಅಲ್ಲ, ಇವತ್ತು ಕಾಟನ್ ಕಾರ್ಪೋರೇಷನ್ ಆಫ್ ಇಂಡಿಯಾದವರು ಮಾರ್ಕೆಟಿನಲ್ಲಿ ಬಂದ್‌ನಂತರ ಹತ್ತಿಗೆ ರೇಟ್ ಸಿಗುತ್ತದೆ. ಇಂತಹ ಕೆಲವೊಂದು ಸಂದರ್ಭಗಳಲ್ಲಿ ಸರ್ಕಾರ ಮುಂದೆ ಬರಬೇಕಾಗುತ್ತದೆ. ಇವತ್ತು ಬೋರ್ಡ್ ಮಾಡಿದ್ದಾರೆ, ಆ ಬೋರ್ಡ್‌ಗೆ ಇವತ್ತು ಹಣದ ಕೊರತೆಯೋ ಏನೋ ಗೊತ್ತಿಲ್ಲ. ಏಕಾಏಕಿ ನಿನ್ನೆ ಫೋನ್ ಮಾಡಿ ಖರೀದಿ ಮಾಡಬಾರದು ಎಂದು ಹೇಳಿದ್ದಾರೆ. ಮೊನ್ನೆ ಒಂದು ಫೋನ್ ಮಾಡಿ ಆದೇಶ ಕೊಟ್ಟರು, ಟಿ ಎ ಸಿ ಸಿ ಎಂ ಎಸ್ ಗಳಿಗೆ, ತಾಲ್ಲೂಕಾ ಮಾರ್ಕೆಟಿಂಗ್ ಕಮಿಟಿಗಳಲ್ಲಿ ಏನು ಖರೀದಿ ಮಾಡುತ್ತಿದ್ದಾರೆ, ಪ್ರತಿ ದಿವಸ 50 ಚೀಲ ಮಾತ್ರ ಖರೀದಿ ಮಾಡಿ, 50 ಕ್ವಿಂಟಾಲ್ ಮಾತ್ರ ಖರೀದಿ ಮಾಡಿ ಎಂದು ಹೇಳಿದ್ದಾರೆ. ನಿನ್ನೆ ಮತ್ತೆ ಇನ್ನೊಂದು ಆದೇಶ ಕೊಟ್ಟಿದ್ದಾರೆ. ಖರೀದಿಯನ್ನೇ ಮಾಡಬೇಡಿ ಎಂದು ಹೇಳಿದ್ದಾರೆ. ಅಂದರೆ, ಸರ್ಕಾರದಲ್ಲಿ ಹಣ ಇಲ್ಲವೇ ಅಥವಾ ವ್ಯಾಪಾರಿಗಳಿಗೆ ಲಾಭ ಮಾಡಬೇಕು, ರೈತರಿಗೆ ಶೋಷಣೆ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿದೆಯೋ ಗೊತ್ತಿಲ್ಲ. ಇದನ್ನು ಸ್ಪಷ್ಟಪಡಿಸಬೇಕೆಂದು ತಮ್ಮ ಮುಖಾಂತರ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಅಧ್ಯಕ್ಷರೆ. ಮಾನ್ಯ ವೈಜನಾಥ ಪಾಟೀಲರು ಬಹಳ ಮಹತ್ವದ ಪ್ರಶ್ನೆಯನ್ನು ಎತ್ತಿದ್ದಾರೆ. ನಮ್ಮ ಕಡೆ ತೊಗರಿ ಬೆಳೆ ಹೆಚ್ಚು ಮತ್ತು ಅದು ಕಮರ್ಷಿಯಲ್ ಕ್ರಾಪ್. ಅಲ್ಲಿ 5 ಕೋಟಿ ರೂಪಾಯಿ ಇತ್ತು. ಮಾರ್ಕೆಟ್ ಇಂಟರ್‌ವೆನ್‌ಷನ್ ಆದರೆ, ದಳ್ಳಾಳಿಗಳ ಹಾವಳಿ ಸ್ವಲ್ಪ ನಿಲ್ಲುತ್ತದೆ. ಎರಡು ಸಾವಿರ ರೇಟ್ ಬೇಕೆಂಬುದು ರೈತರ ಅಭಿಪ್ರಾಯ. ಆದರೂ ಕೂಡ 1,740 ರೂಪಾಯಿಗಳಿಗೆ ಮುಟ್ಟಿದೆ; ವೈಜನಾಥ ಪಾಟೀಲರು ಹೇಳುತ್ತಿದ್ದಾರೆ, ಮಾರ್ಕೆಟ್ ಇಂಟರ್‌ವೆನ್‌ಷನ್‌ಗೆ ಹಣ ಕಡಿಮೆ ಇದ್ದರೆ, ಇವತ್ತೇ ಮತ್ತೆ ಹಣ ಬಿಡುಗಡೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಿ, ಅವರಿಗೆ ಹೆಚ್ಚಿನ ಸಹಾಯ ಮಾಡತಕ್ಕ ರೀತಿಯಲ್ಲಿ ಸರ್ಕಾರ ವ್ಯವಸ್ಥೆ ಮಾಡುತ್ತದೆ. ಅಲ್ಲಿ ಗ್ರೇಡ್ ಒನ್ ಅಂಡ್ ಟು ಅಂತ ಮಾಡಿದ್ದಾರೆ. ಗ್ರೇಡ್ ಒಂದರಲ್ಲಿ ಖರೀದಿಯೇ ಮಾಡುವುದಿಲ್ಲ. ಕಾರಣ ಏನೆಂದರೆ ಅದು ಕಡ್ಲಿಗೆ ಯಾವ ಚನ್ನಿ ಉಪಯೋಗ ಮಾಡುತ್ತಿದ್ದರೋ ಅದೇ ಸಲುವಾಗಿ ತೊಗರಿಗೂ ಉಪಯೋಗ ಮಾಡುತ್ತಿದ್ದಾರೆ. ಆ ದೃಷ್ಟಿಯಿಂದ ಅಲ್ಲಿಯೂ ಕೂಡ ಏನು ಡಿಫರೆನ್ಸ್ಸ್ ಬರುತ್ತಿದೆ ಅದನ್ನು ಸರ್ಕಾರ ಸರಿಪಡಿಸಬೇಕು ಮತ್ತೆ ನಾಳೆಯಿಂದ ಬಜಾರಿಗೆ ಎಷ್ಟು ಬರುತ್ತದೆಯೋ, ಮಾರ್ಕೆಟಿಂಗ್ ಕಮಿಟಿಗೆ ಬರುತ್ತದೆಯೋ, ಟಿ ಎ ಪಿ ಎಂ ಸಿ ಗೆ ಬರುತ್ತದೆಯೋ ಅಲ್ಲಿ ಹೆಚ್ಚು ಖರೀದಿ ಮಾಡಬೇಕು ಟಿ ಎ ಪಿ ಎಂ ಸಿ ಯವರು ಮಾರ್ಕೆಟ್ ಕೊಡಬೇಕು. ಅವರು ಅಲ್ಲಿ ಹೋಗಿ ಬಿಡ್ಡಿಂಗ್ ಮಾಡಬೇಕು ಇದರಿಂದ ಸ್ವಲ್ಪ ರೇಟ್ ಬರಬಹುದು ರೈತರಿಗೆ ಇದರಿಂದ ಕಾಂಪಿಟೇಶನ್ ಹೆಚ್ಚು ಆಗಬಹುದು. ಎಂದು ನಾನು ಸರ್ಕಾರಕ್ಕೆ ಹೇಳುತ್ತೇನೆ.

ಅಧ್ಯಕ್ಷರು : ಉತ್ತರ ಕೊಟ್ಟಿದ್ದಾರಲ್ಲಾ.

ಈ) ವಿಷಯ : ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ನೀರಾವರಿ ಯೋಜನೆಗಳು ಆಗದೇ ಇರುವುದರಿಂದ ರೈತರು ಧರಣಿ ಸತ್ಯಾಗ್ರಹ ಪ್ರಾರಂಭಿಸುವ ಬಗ್ಗೆ

ಶ್ರೀ ಗೋವಿಂದ ಎಂ. ಕಾರಜೋಳ್ (ಮುದೋಳ್) : ಮಾನ್ಯ ಅಧ್ಯಕ್ಷರೆ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಕೃಷ್ಣಾ ಕಣಿವೆಯಿಂದ (ಎ) ಸ್ಕೀಮ್‌ನಲ್ಲಿ ಏನು ನೀರು ಹಂಚಿಕೆಯಾಗಿದೆ ಆ ಹಂಚಿಕೆಯಾದಂತಹ ನೀರಿನಲ್ಲಿ ಆಗಬೇಕಾದಂತಹ ಯೋಜನೆಗಳು ಇದುವರೆಗೂ ಕಾರ್ಯಗತವಾಗಿಲ್ಲ. ಆ ಕಾರಣಕ್ಕಾಗಿ ಇವತ್ತು 11 ತಾಲ್ಲೂಕಿನಲ್ಲಿ ರೈತರು ಧರಣಿ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ, ಮತ್ತ ಸಂಸದರ ನೇತೃತ್ವದಲ್ಲಿ, ಶಾಸಕರ ನೇತೃತ್ವದಲ್ಲಿ ಪಾದಯಾತ್ರೆಯ್ನು ಪ್ರಾರಂಭ ಮಾಡಿದ್ದಾರೆ. ಅದಕ್ಕಾಗಿ ನಾನು ಇವತ್ತು ಸರ್ಕಾರಕ್ಕೆ ಒಂದು ವಿವರವಾದ ಮಾಹಿತಿಯನ್ನು ಕೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಏನು ಯೋಜನೆಗಳು ಬರುತ್ತವೆ, ಕೃಷ್ಣಾ ಮೇಲ್ಕಂಡೆ ಯೋಜನೆ ಮತ್ತು ಕೃಷ್ಣಾ ಕಣಿವೆ ಯೋಜನೆಗಳ ಬಗ್ಗೆ ಬಚಾವತ್ ತೀರ್ಪಿನ ಪ್ರಕಾರ 734 ಟಿ, ಎಂ, ಸಿ, ಯಷ್ಟು ನೀರು ಹಂಚಿಕೆಯಾಗಿತ್ತು ಅದರಲ್ಲಿ 5 ಟಿ, ಎಂ, ಸಿ, ಯಷ್ಟು ನೀರನ್ನು ಮದ್ರಾಸ್‌ಗೆ ಕುಡಿಯುವ ನೀರಿಗೋಸ್ಕರ ಬಿಟ್ಟು ಕೊಟ್ಟೆವು. ಉಳಿದ 729 ಟಿ ಎಂ ಸಿ ಯಲ್ಲಿ 173 ಟಿ ಎಂ ಸಿ ಯಷ್ಟು ನೀರನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ಏತ ನೀರಾವರಿ ಮತ್ತು ಗ್ರಾವಿಟಿ ಮುಖಾಂತರ ಮತ್ತು ಕೆನಾಲ್ ಮುಖಾಂತರ ನೀರಾವರಿ ಮಾಡತಕ್ಕಂಥ ಯೋಜನೆಗಳಿಗೆ ಹಂಚಿಕೆಯಾಯಿತು. ಈ ಯೋಜನೆಯನ್ನು 2000ದ ಮೇ 31ರೊಳಗಾಗಿ ಮುಗಿಸಬೇಕಾಗಿತ್ತು. ಆದರೆ ಇದುವರೆವಿಗೂ ಯೋಜನೆಗಳು ಪೂರ್ತಿಯಾಗಿಲ್ಲ. ನಮಗೆ ಹಂಚಿಕೆಯಾದಂತಹ ನೀರು ಏನು 173 ಟಿ ಎಂ ಸಿ ಇದೆ ಅದರೆ ಬಳಕೆಯಾಗಿಲ್ಲ. 173 ಟಿ ಎಂ ಸಿ ನೀರನ್ನು ಉಪಯೋಗಿಸಿ 6 ಲಕ್ಷ 22 ಸಾವಿರ ಹೆಕ್ಟೇರ್ ಭೂಮಿಗೆ ಇವತ್ತು ನೀರಾವರಿ ಮಾಡಬೇಕಾಗಿತ್ತು.